# ಷೇರು ಹೂಡಿಕೆ ಮಾಹಿತಿಯೇ ಶಕ್ತಿ

**ಷೇರು ಮಾರುಕಟ್ಟೆಯಲ್ಲಿ ಹಣ ಹೂಡುವುದು ಕೆಲವರಿಗೆ ಜೂಜು, ಅದೃಷ್ಟದಾಟ. ಕೆಲವೇ ಕೆಲವರು ಷೇರು ವ್ಯವಹಾರವನ್ನು ತಾರ್ಕಿಕ ನೆಲೆಗಟ್ಟಿನಲ್ಲಿ ಅರ್ಥ ಮಾಡಿಕೊಳ್ಳಲು, ವಿಶ್ಲೇಷಿಸಲು ಪ್ರಯತ್ನಿಸುತ್ತಾರೆ.**

■ ವಿಜಯ್ ಜೋಷಿ



ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡುವವರಿಗೆ ಅಪಾರ ತಾಳ್ಮೆ ಬೇಕು ಎಂಬುದು ಮಾರುಕಟ್ಟೆ ಹೂಡಿಕೆಯ ವಿಚಾರವಾಗಿ ಆಗಾಗ ಕೇಳಿಬರುವ ಮಾತು. ಷೇರುಗಳಲ್ಲಿ ಹಣ ಹೂಡಿಕೆ ಮಾಡುವುದಕ್ಕೆ ಸಂಬಂಧಿಸಿದಂತೆ ನಾಲ್ಕು ಜನ ಒಟ್ಟು ಸೇರಿ ಮಾತನಾಡುತ್ತಿದ್ದಾರೆ ಎಂದಾಗ, ಅಲ್ಲಿ ಈ ಮಾತು ಅಥವಾ ಇದೇ ಅರ್ಥ ಕೊಡುವ ಮಾತು ಒಮ್ಮೆಯಾದರೂ ಬಂದುಹೋಗುತ್ತದೆ. ಷೇರುಗಳಲ್ಲಿ ಹೂಡಿಕೆ ಮಾಡಲು ಬಯಸುವವರಿಗೆ ಅಪಾರ ತಾಳ್ಮೆ ಬೇಕು ಎಂದಾದರೆ, ಎಷ್ಟು ತಾಳ್ಮೆಯ ಅವಶ್ಯಕತೆ ಇದೆ? ಎಷ್ಟು ಕಾಲ ತಾಳ್ಮೆಯಿಂದ ಕಾಯುತ್ತಿದ್ದರೆ ಒಳ್ಳೆಯ ಲಾಭ ಪಡೆಯಲು ಸಾಧ್ಯವಿದೆ? ಇದಕ್ಕೆ ಖಚಿತ ಉತ್ತರ ಇಲ್ಲ. ಷೇರು ಮಾರುಕಟ್ಟೆಯ ಗತಿಯನ್ನು ಓದಲು ಬಲ್ಲವರು ಇಲ್ಲ! ಇಲ್ಲಿ ತಾಳ್ಮೆ ಬೇಕು ಎಂಬುದಕ್ಕಿಂತಲೂ, ಅಪಾರ ಮಾಹಿತಿ ಬೇಕು ಎಂಬುದು ಹೆಚ್ಚು ಸೂಕ್ತವಾಗುವ ಮಾತು ಆದೀತು.

ಈ ಮಾತಿಗೆ ಪುಷ್ಟಿಯಾಗಿ ನಿಜ ಜೀವನದಲ್ಲಿ ಆಗಿರಬಹುದಾದ ಒಂದೆರಡು ಉದಾಹರಣೆಗಳನ್ನು ಗಮನಿಸೋಣ. ವಿಶ್ವಾಸ್ (ಹೆಸರು ಬದಲಾಯಿಸಲಾಗಿದೆ) ಎಂಬುವವರು ಒಳ್ಳೆಯ ಹೆಸರು ಇರುವ ಕಂಪನಿಯೊಂದರ ಷೇರುಗಳನ್ನು ಮೊದಲಿಗೆ ₹ 116ರಂತೆ ಖರೀದಿಸಿದರು. ಆಗ ಆ ಕಂಪನಿಯ ಷೇರು ಮೌಲ್ಯವು ಏರುಗತಿಯಲ್ಲಿ ಇತ್ತು. ಅದನ್ನು ಗಮನಿಸಿ ವಿಶ್ವಾಸ್ ಅವರು ಆ ಷೇರುಗಳನ್ನು ಖರೀದಿಸಿದ್ದರು. ವಿಶ್ವಾಸ್ ಅವರು ಷೇರು ಖರೀದಿಸಿದ ಒಂದೆರಡು ವಾರಗಳ ನಂತರವೂ ಷೇರು ಮೌಲ್ಯವು ಏರುಗತಿಯಲ್ಲಿಯೇ ಇತ್ತು. ನಂತರ, ಆ ಕಂಪನಿಯು ಕಾನೂನು ತೊಡಕಿನಲ್ಲಿ ಸಿಲುಕಿಕೊಂಡ ವರದಿಗಳು ಪ್ರಕಟವಾದವು. ಇದಾದ ನಂತರ ಕಂಪನಿಯ ಷೇರುಗಳ ಮೌಲ್ಯವು ಒಂದೇ ಸಮನೆ ಬೀಳತೊಡಗಿತು.

ಒಳ್ಳೆಯ ಕಂಪನಿಗಳ ಷೇರು ಮೌಲ್ಯವು ಕಡಿಮೆ ಆಗಿದ್ದಾಗ, ಆ ಷೇರುಗಳನ್ನು ಇನ್ನೂ ಹೆಚ್ಚು ಖರೀದಿಸಬೇಕು ಎಂಬ ಮಾತು ಷೇರುಗಳಲ್ಲಿ ಹೂಡಿಕೆ ಮಾಡಿದವರ ನಡುವೆ ಆಗಾಗ ಬಂದುಹೋಗುತ್ತ ಇರುತ್ತದೆ.